


ಕೆಲಸಕ್ಕಿಟ್ಟುಕೊಂಡು, ಫಾರ್ಮಿನ ಮತ್ತು ಮನೆಯ ವ್ಯವಹಾರವನ್ನೆಲ್ಲ ಅವನಿಗೊಪ್ಪಿಸಿ, ಎರಡೆಕರೆ ಜಮೀನಿನಲ್ಲಿ ಉತ್ತರಕ್ಕಿರುವ ಹೆಬ್ಬಂಡೆಯೊಂದರ ಮೇಲೆ ಕುಳಿತೋ, ಮಲಗಿಯೋ ಗಂಟೆಗಟ್ಟಲೆ ಆಕಾಶ ನೋಡಿಕೊಂಡು, ಆಚೆನಾವುದೋ ಆಕಾಶಗಂಗೆಯೊಡನೆ ಸಂವೇದಿಸಿಕೊಂಡು, ಹೊತ್ತುಗೊತ್ತು ಮರೆತು ಇರುತ್ತಿದ್ದ. ಈ ನಡುವೆ, ಆತನಿಗೆ ಸಾಕ್ಷಾತ್ಕಾರವಾಗಿತ್ತೆಂದೂ, ನೋಡಲಿಕ್ಕೆ ಫಕ್ಕನೆ ಶತಮಾನಗಳ ಹಿಂದಿನಿಂಡಿಯಾದ ಋಷಿಮುನಿಗಳಂತೆ ತೋರ್ಪಡುತ್ತಾನೆಂದೂ, ಆತನ ಮನೆ ಕಟ್ಟುವಾಗಿದ್ದ ಕಾರ್ಪೆಂಟರೊಬ್ಬನಿಂದ ರುದ್ರನೀಲ ಥಾಪಸೆ ಕೇಳಪಟ್ಟಿದ್ದ. 'ಥೇಟು ಸ್ವಾಮೀಜಿ ಅಂತನಿಸುತ್ತಾರೆ, ಸರ್... ನೋಡಿದರೆ ಕೈಯೆತ್ತಿ ಮುಗೀಬೇಕನಿಸುತ್ತೆ...' ಕಾರ್ಪೆಂಟರ್ ಶಿವಪೆರುಮಾಳ್ ಹೇಳಿದ ಮಾತನ್ನು, ರೇಣುವಿಗೆ, ನಡುದಾರಿಯಲ್ಲಿ ಆಡಿ, ರುದ್ರನೀಲ ಥಾಪಸೆ ನೆನಪು ಮೆಲುಕಿಕೊಂಡ. 'ಒಂದು ಥರಾ ಮಿಸ್ಟಿಕ್ ಮನುಷ್ಯ ಅಲ್ಲವಾ? ಯಾವ ಜನುಮದಲ್ಲಿ ಏನು ನಂಟಿತ್ತೋ ಈ ಮನುಷ್ಯನಿಗೆ ಇಂಡಿಯಾದ ಜೊತೆ?!' ಎಂದು ಉದ್ಗರಿಸುತ್ತಿರುವಾಗ, ಕಾರು ತುಮಕೂರು ರೋಡಿನ ಜಾಡು ಹಿಡಿದಿತ್ತು. 'ಬಡಾನೀಲ್... ನಿನಗೆ ಕುಣಿಗಲ್ ದಾರೀಲಿ ಯಾವ ಕಡೆ ಹೊರಳಬೇಕೂಂತ ನೆನಪಿದೆಯಲ್ಲವಾ?' ರೇಣು ಏನನ್ನೋ ನೆನಪಿಸಿಕೊಂಡವಳಂತೆ, ದಾರಿ ಸ್ಟಿಯರಿಸುತ್ತ ಕೇಳಿದಳು. 'ಹುಡುಕೋಣ... ನಡೀ...' ಎಂದು ರುದ್ರನೀಲ ಥಾಪಸೆ ವಾಪಸು ನೆನಪು ಹುಡುಹುಡುಕಿಕೊಂಡು ಮನಸ್ಸಿನೊಳಕ್ಕಿಳಿದ.

★★★

'ಏನಾಗಿತ್ತೂಂತ, ಆ ನಮ್ಮಪ್ಪ ಶಿವನಿಗಷ್ಟೇ ಗೊತ್ತು, ನೀಲ್ ಸಾರ್...' ಶರಣಪ್ಪ, ತನ್ನ ಧಣಿಯ ನಿಶ್ಚೇಷ್ಟಿತ ದೇಹದೆದುರೇ ಬಿಕ್ಕಿ, ನಿಡುಸುಯ್ಯುತ್ತ ರುದ್ರನೀಲ ಥಾಪಸೆಯನ್ನುದ್ದೇಶಿಸಿ ಆಡತೊಡಗಿದ. '...ನಿನ್ನೆ ಸಂಜೆ ಯಾವೊತ್ತಿನ ಥರ ಏಳೂವರೆಯ ಮೇಲೆ, ಆ ಬಂಡೆ ಮೇಲಿಂದೆದ್ದು ಬಂದುಂಡರು... ಅದೇನು ತೃಪ್ತಿಯಿತ್ತು, ಸಾರ್, ಅವರ ಕಣ್ಣುಗಳಲ್ಲಿ. ಎಂದಿಗಿಂತ ಹೆಚ್ಚಿಗೇನೇ ಉಂಡು ತೇಗಿದರು. ಇನ್ನು ಮಲೀಕ್ಕೋಬೇಕು, ನೀನೂ ಬೇಗ ಹೋಗಿ ಮಲೀಕ್ಕೋ ಅಂತಂದರು... ನಿನ್ನೆ ಹುಣ್ಣಿಮೆ ಅಲ್ಲವರಾ, ಸುಮಾರು ಹೊತ್ತು ಆಕಾಶದಲ್ಲಿ